**CC No.615/2014**
**CW-4  PW-3**

# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಕನಕಪುರ

## ಸಿಸಿ ನಂ.615/2014

| | | | |
|---|---|---|---|
| ಚಾಸಾ | **4** | ಪ್ರಾಸಾ | **3** |
| ಹೆಸರು | | ರಾಜಣ್ಣ | |
| ತಂದೆಯ ಹೆಸರು / ಗಂಡನ ಹೆಸರು | | ದಾಸೇಗೌಡ | |
| ವಯಸ್ಸು | | **57**ವರ್ಷಗಳು | |
| ಉದ್ಯೋಗ | | ವ್ಯವಸಾಯ | |
| ವಿಳಾಸ | | ಉಯ್ಯಲಪ್ಪನಹಳ್ಳಿ ಗ್ರಾಮ | |

ದಿನಾಂಕ.**24.06.2025**ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯವಿಚಾರಣೆ ಮಾನ್ಯ  ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಚಾಸಾ-**1** ರಿಂದ ಚಾಸಾ-**3**, ಚಾಸಾ-**5** ಮತ್ತು **6** ರವರು ನನಗೆ ಗೊತ್ತು. ನನಗೆ ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು.

ಸಾಕ್ಷಿಗೆ ಒಂದು  ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯು ಗುರುತಿಸಿದ ದಾಖಲೆಯು ಸ್ಥಳ ಮತ್ತು ಅಮಾನತು ಮಹಜರ್  ಆಗಿದ್ದು ಅದನ್ನು ಈಗಾಗಲೇ ನಿಪಿ-**2** ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**2**(ಬಿ) ಎಂದು ಗುರುತಿಸಲಾಯಿತು.

ನಿಪಿ-2ಕ್ಕೆ ದಿನಾಂಕ.22.11.2013ರಂದು ನಾನು 1ನೇ ಆರೋಪಿಯ ಮನೆಯ ಬಳಿ ಪೊಲೀಸರು ಮಹಜರ್ಗಾಗಿ ಬಂದಾಗ ನನ್ನ ಸಹಿ ಪಡೆದಿರುತ್ತಾರೆ. ಪೊಲೀಸರು ಗಲಾಟೆಯ ವಿಚಾರಕ್ಕೆ ಸಂಬಂಧಿಸಿದಂತೆ ನನ್ನನ್ನು ಸ್ಥಳದಲ್ಲಿ ವಿಚಾರಿಸಿರುತ್ತಾರೆ. ಆ ಸಮಯದಲ್ಲಿ ಗಲಾಟೆಯ ವಿಚಾರಕ್ಕೆ ಸಂಬಂಧಿಸಿದಂತೆ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. 1ನೇ ಆರೋಪಿ ಮತ್ತು ಚಾಸಾ-2 ರವರು ಗಲಾಟೆ ಮಾಡಿಕೊಳ್ಳುತ್ತಿದ್ದರು. ಆಗ 1ನೇ ಆರೋಪಿಯು ಅಲ್ಲಿಗೆ ಬಂದು ಜಾಕ್ ರಾಡ್ ತೆಗೆದುಕೊಂಡು ಚಾಸಾ-2 ರವರ ಎಡಗೈ ತೋಳಿಗೆ ಹೊಡೆದರು. ಜಗದೀಶ, ರಾಘು ಮತ್ತು ನಾನು ಜಗಳ ಬಿಡಿಸಿ ಸಮಾಧಾನ ಮಾಡಿದೆವು. ಇಷ್ಟನ್ನು ಹೊರತುಪಡಿಸಿ ನನಗೆ ಬೇರೇನು ಗೊತ್ತಿಲ್ಲ. 1ನೇ ಆರೋಪಿ ಚಾಸಾ-2 ರವರಿಗೆ ಹೊಡೆಯಲು ಉಪಯೋಗಿಸಿದ ಕಬ್ಬಿಣದ ರಾಡನ್ನು ನೋಡಿದರೆ ಗುರುತಿಸುತ್ತೇನೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಒಂದು ಕಬ್ಬಿಣದ ರಾಡನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಗುರುತಿಸಿದ ಕಬ್ಬಿಣದ ರಾಡನ್ನು ಈಗಾಗಲೇ ಮುದ್ದೆಮಾಲು-1 ಎಂದು ಗುರುತಿಸಲಾಗಿರುತ್ತದೆ.

ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ದವಾಗಿ ಸಾಕ್ಷ್ಯ ನುಡಿದಿರುವುದರಿಂದ ಅವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರವರು ಅನುಮತಿ ಕೋರಿದ್ದು, ಅನುಮತಿಯನ್ನು ನೀಡಲಾಯಿತು.

ಪಾಟೀ ಸವಾಲು ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-

ಪೊಲೀಸರು ಮಹಜರ್ಗಾಗಿ ಊರಿಗೆ ಬಂದದ್ದು ದಿನಾಂಕ.24.11.2013ರಂದು ಎಂದರೆ ಸರಿಯಲ್ಲ. ಮಹಜರ್ ಕಾಲಕ್ಕೆ ಚಾಸಾ-1, ನಾನು ಮತ್ತು ಚಾಸಾ-6 ರವರು ಸ್ಥಳದಲ್ಲಿ ಹಾಜರಿದ್ದೆವು ಎಂದರೆ ಸರಿ. ಚಾಸಾ-1 ರವರು ಚಾಸಾ-2 ರವರಿಗೆ ಆರೋಪಿತರು ಯಾವ ರೀತಿ ಹಲ್ಲೆ ಮಾಡಿದರು

ಎಂಬ ಬಗ್ಗೆ ಸ್ಥಳದಲ್ಲಿ ಪೊಲೀಸರಿಗೆ ಹೇಳಿದ ಮೇರೆಗೆ ಪೊಲೀಸರು ನಿಪಿ-**2**ನ್ನು ಆ ದಿನ ಸ್ಥಳದಲ್ಲಿ ತಯಾರಿಸಿರುತ್ತಾರೆ ಎಂದರೆ ಸರಿ. ನಿಪಿ-**2**ರ ಸಂಗತಿಗಳನ್ನು ನಮಗೆ ಸ್ಥಳದಲ್ಲಿಯೇ ಓದಿ ಹೇಳಿ ನನ್ನ ಮತ್ತು ಚಾಸಾ-**6** ರವರ ಸಹಿಯನ್ನು ಪೊಲೀಸರು ಪಡೆದುಕೊಂಡಿರುತ್ತಾರೆ ಎಂದರೆ ಸರಿ.

ದಿನಾಂಕ.**04.06.2013**ರಂದು ಆರೋಪಿಗಳು ಹಳೆಯ ದ್ವೇಷವನ್ನು ಇಟ್ಟುಕೊಂಡು ಚಾಸಾ-**2** ರವರಿಗೆ ಅವಾಚ್ಯ ಶಬ್ದಗಳಿಂದ ಬೈದು **1**ನೇ ಆರೋಪಿಯು ಕಬ್ಬಿಣದ ರಾಡಿನಿಂದ ಚಾಸಾ-**2** ರವರಿಗೆ ಹಲ್ಲೆ ಮಾಡಿದರು ಎಂದು ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆಂದರೆ ಸರಿ. **2** ಮತ್ತು **3**ನೇ ಆರೋಪಿತರು ಚಾಸಾ-**2** ರವರಿಗೆ ಕೈಗಳಿಂದ ಹೊಡೆದು ಹಲ್ಲೆ ಮಾಡಿದರು ಎಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ. ಚಾಸಾ-**2** ರವರಿಗೆ ಆರೋಪಿತರು ಬಾಯಿಗೆ ಬಂದಂತೆ ಬೈದು ಜೀವ ಬೆದರಿಕೆಯನ್ನು ಸಹ ಹಾಕಿದರು ಎಂದು ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ. ನಾನು ಚಾಸಾ-**3** ಮತ್ತು ಚಾಸಾ-**5** ರವರು ಜಗಳ ಬಿಡಿಸಿ ಸಮಾಧಾನ ಮಾಡಿ ಕಳುಹಿಸಿರುತ್ತೇವೆ ಎಂದರೆ ಸರಿ. ನಂತರ ಚಾಸಾ-**1** ರವರು ಚಾಸಾ-**2** ರವರನ್ನು ಕನಕಪುರದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋದರು ಎಂದರೆ ಸರಿ. ಈ ಘಟನೆಯು ನಡೆದದ್ದು **2013**ನೇ ಸಾಲಿನಲ್ಲಿ ಆದಕಾರಣಕ್ಕೆ ನನಗೆ ದಿನಾಂಕದ ಬಗ್ಗೆ ನೆನಪಿಲ್ಲದೆ ದಿನಾಂಕವನ್ನು ತಪ್ಪಾಗಿ ಹೇಳಿರುತ್ತೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ- ಆರೋಪಿತರ ಪರ ವಕೀಲರಾದ ಶ್ರೀ ಸಿಎಂಜೆ ರವರಿಂದಃ-</u>

ಸಂಪಿನ ವಿಚಾರಕ್ಕೆ ಸಂಬಂಧಿಸಿದಂತೆ ಚಾಸಾ-**1** ರವರ ಕುಟುಂಬಕ್ಕೂ ಮತ್ತು ಆರೋಪಿತರ ಕುಟುಂಬಕ್ಕೂ ಮೊದಲಿನಿಂದಲ್ಲೂ ವಿವಾದ ಇದೆ ಎಂದರೆ ಸರಿ. ಸಂಪು, ಮನೆ ಮತ್ತು ಹಿತ್ತಳನ್ನು ಸೇರಿಸಿ **1**ನೇ ಆರೋಪಿಯ ತಾಯಿಯಾದ ಚನ್ನಮ್ಮ ರವರಿಗೆ ಆಕೆಯ ತಂದೆ ವಿಲ್ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಚನ್ನಮ್ಮ ರವರನ್ನು ಗಂಡ ಬಿಟ್ಟಿರುವ ಕಾರಣಕ್ಕೆ ಉಯ್ಯಲಪ್ಪನಹಳ್ಳಿಗೆ ಬಂದು ಆ ಜಾಗದಲ್ಲಿ ಮನೆ ಕಟ್ಟಿಕೊಂಡು ವಾಸವಿರುತ್ತಾರೆ ಎಂದರೆ ಸರಿ. ಸದರಿ ಚನ್ನಮ್ಮ ರವರು ಚಾಸಾ-**1** ಮತ್ತು ಆತನ

ಸಹೋದರರು ಸದರಿ ಮನೆ ಸಂಪು ಮತ್ತು ಜಾಗಕ್ಕೆ ಸಂಬಂಧಿಸಿದಂತೆ ಆಕೆಗೆ ತೊಂದರೆ ಕೊಡುತ್ತಿದ್ದಾರೆಂದು ಒಂದು ದಾವೆಯನ್ನು ಸಹ ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಚನ್ನಮ್ಮ ರವರ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ಪ್ರಕಾರವಾಗಿ ತೊಂದರೆ ಕೊಡಬಾರದು ಎಂದು ಚಾಸಾ-1 ರವರ ವಿರುದ್ದ ದಾವೆಯು ಡಿಕ್ರಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಚನ್ನಮ್ಮ ರವರು ಚಾಸಾ-1 ರವರು ಮತ್ತು ಅವರ ಮನೆಯವರ ವಿರುದ್ದವಾಗಿ ದಾವೆ ಸಲ್ಲಿಸಿದ್ದಕ್ಕಾಗಿಯೇ ದ್ವೇಷವನ್ನು ಇಟ್ಟುಕೊಂಡು ಈ ಸುಳ್ಳು ದೂರನ್ನು ಆರೋಪಿತರ ವಿರುದ್ದ ಹೂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನಾನು ಹೇಳಿದಂತೆ ಚಾಸಾ-2 ರವರೊಂದಿಗೆ ಆರೋಪಿತರು ಯಾವತ್ತು ಜಗಳ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ ಮತ್ತು ಕಬ್ಬಿಣದ ಸರಳಿನಿಂದ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಮುದ್ದೆಮಾಲು-1ನ್ನು ಮನೆ ಕಟ್ಟಲು ಉಪಯೋಗಿಸಿರುತ್ತಾರೆ ಮತ್ತು ಅದನ್ನು ಕಬ್ಬಿಣದ ಸರಳು ಎಂದು ಕರೆಯುತ್ತಾರೆ ಎಂದರೆ ಸರಿ. ಮುದ್ದೆಮಾಲು-1 ರಿಂದ ಲಾರಿಯ ಜಾಕನ್ನು ತಿರುಗಿಸಲು ಸಾಧ್ಯವಿಲ್ಲ ಎಂದರೆ ಸರಿ. ಮುದ್ದೆಮಾಲು-1ನ್ನು ಚಾಸಾ-1 ರವರು ಪೊಲೀಸರಿಗೆ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಆ ದಿನ ಮಹಜರ್ ಮಾಡಲು ಸ್ಥಳಕ್ಕೆ ಬಂದ ಪೊಲೀಸರ ಹೆಸರು ನನಗೆ ಗೊತ್ತಿಲ್ಲ. ನಿಪಿ-2ನ್ನು ಆ ದಿನ ಬೆಳಿಗ್ಗೆ 10ಃ30 ರಿಂದ 11ಃ00 ಗಂಟೆಯ ವರೆಗೆ ಬರೆದಿರುತ್ತಾರೆ. ನಿಪಿ-2ರ ಸಂಗತಿಗಳನ್ನು ಆ ದಿನ ಪೊಲೀಸರು ನನಗೆ ಓದಿ ತಿಳಿಸಿರುತ್ತಾರೆ. ಚಾಸಾ-1 ರವರು ಆ ದಿನ ಹೇಳಿಕೆ ಕೊಟ್ಟ ಸಂಗತಿ ಬಗ್ಗೆ ಪೊಲೀಸರು ಓದಿ ತಿಳಿಸಿರುತ್ತಾರೆ. ನಿಪಿ-2ರಲ್ಲಿ ಚಕ್ಕುಬಂದಿಯ ಬಗ್ಗೆ ನಮೂದಿಸಲಾಗಿದೆ, ಅದರ ಪ್ರಕಾರ ಪೂರ್ವಕ್ಕೆ ಮತ್ತು ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ 1ನೇ ಆರೋಪಿಯ ಮನೆ ಮತ್ತು ಸಂಪು ಬರುತ್ತದೆ. ನನ್ನ ಸಮಕ್ಷಮ ಪೊಲೀಸರು ಸ್ಥಳ ಮಹಜರ್ ಮಾಡಿಲ್ಲ, ಸ್ಥಳದಲ್ಲಿ ಯಾವುದೇ ಮಹಜರ್ ನ್ನು ತಯಾರಿಸಿಲ್ಲ ಮತ್ತು ನನ್ನ ಸಹಿಯನ್ನು ಸ್ಥಳದಲ್ಲಿ ಪಡೆದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ

ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಚಾಸಾ-**1** ಮತ್ತು ಚಾಸಾ-**2** ರವರೊಂದಿಗೆ ಅನ್ಯೂನ್ಯವಾಗಿರುವ ಕಾರಣಕ್ಕೆ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ:- ಇಲ್ಲ

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಢೀಕರಿಸುತ್ತೇನೆ.)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**